ತುಂಬು ಬಸುರಿಯಂತೆ. ಆನಂದ ವಿಹಾರ್ ಬಸ್‌ಸ್ಟಾಪಿನಲ್ಲೇ ಬಸ್ಸಿನಲ್ಲಿರುವಾಗಲೇ ಅಮ್ಮನಿಗೆ ಹೆರಿಗೆಯಾಗಿ ನಾನು ಹುಟ್ಟಿದೆನಂತೆ. ಹಾಗಾಗಿ ಅದೇ ಹೆಸರನ್ನೇ ನನಗೆ ಇಟ್ಟರಂತೆ. ಆದರೆ ಎಲ್ಲರಿಗೂ ನನ್ನ ಹೆಸರು ಆನಂದಿ ಎಂದಷ್ಟೇ ಗೊತ್ತು... ಮತ್ತೆ ನಿಮ್ಮ ಹೆಸರೇನು...'' ಅವನ ಬಗ್ಗೆ ಅವಳಿಗೂ ಕುತೂಹಲವಿರುವುದು ಸ್ಪಷ್ಟವಾಗಿತ್ತು. ''ಅಪ್ಪ ಅಮ್ಮ ರಾಮನ ಭಕ್ತರು. ಹಾಗಾಗಿ ನನಗೆ ರಾಮ್ ಲಾಲ್ ಎಂದು ಹೆಸರಿಟ್ಟಿದ್ದಾರೆ...'' ಅವನ ಮಾತಿಗೆ, ''ಒಳ್ಳೆಯ ಹೆಸರು, ಆದರೆ ರಾಮನಿಗೆ ಕಷ್ಟಗಳು ಜಾಸ್ತಿ...'' ಎಂದು ನಕ್ಕಿದ್ದಳು. ಅಷ್ಟರಲ್ಲಿ ಅವಳ ಫ್ಯಾಕ್ಟರಿ ಬಂದಿತ್ತು. ಆಟೋಗೆ ತನ್ನ ಪಾಲಿನ ಚಾರ್ಜ್ ಕೊಡಲು ಹೋಗಿದ್ದಳು. ''ನಾನು ಕೊಡ್ತೀನಿ ಬಿಡಿ ಮೇಡಂ...'' ಎಂದು ಕೈ ಅಡ್ಡ ಇಟ್ಟಿದ್ದ. ಇಬ್ಬರು ಕೈಗಳು ತಾಕಿದ್ದವು. ಪರಸ್ಪರರ ಕೈ ಸ್ಪರ್ಶ ಇಬ್ಬರಲ್ಲೂ ವಿಶೇಷವಾದ ಅನುಭೂತಿಯನ್ನು ಉಂಟುಮಾಡಿತ್ತು. ''ಮೇಡಂ ಅನ್ನಬೇಡಿ ನನ್ನನ್ನು, ಆನಂದಿ ಎಂದು ಕರೆಯಿರಿ ಸಾಕು...'' ಎಂದು ನಗುತ್ತಾ ಫ್ಯಾಕ್ಟರಿಯ ದಾರಿ ಹಿಡಿದಿದ್ದಳು.

ಆ ಕ್ಷಣದಿಂದ ಹೊಸ ಚೈತನ್ಯವೊಂದು ತನ್ನ ತನುಮನಗಳಲ್ಲಿ ಉಸಿರು ಹೊಯ್ದುಕೊಂಡಂತೆ ಅನ್ನಿಸತೊಡಗಿತ್ತು ರಾಮ್ ಲಾಲನಿಗೆ. ಕೆಲಸ ಕಾರ್ಯಗಳಲ್ಲಿ ಹುಮ್ಮಸ್ಸು ಇಮ್ಮಡಿಯಾಗಿತ್ತು. ಅವನ ಉತ್ಸಾಹವನ್ನು ಕಂಡು ಸೆಕ್ಷನ್ ಸೂಪರ್ ವೈಸರ್ ಧರ್ಮ ಪಾಲ್, ''ಏನ್ ರಾಮ್ ಲಾಲ್, ಯಾರಾದರೂ ಹುಡುಗೀನ ಪ್ರೀತಿಸಿಗೀತಿಸ್ತಾ ಇದೀಯ. ನಿನ್ನಲ್ಲಿ ಬದಲಾವಣೆ ಕಂಡ್ರೆ ಹಾಗೆ ಅನ್ನಿಸ್ತಿದೆ ನಂಗೆ. ಮದ್ವೆ ಮಾಡ್ಕೊಂಡು ಬಿಡು, ಇನ್ನೇನು ಇಪ್ಪತ್ತಾರು ಆಯ್ತಲ್ಲಾ ನಿಂಗೂ. ವಯಸ್ಸಿದ್ದಂಗೆ ಮಾಡ್ಕೊಂಡ್ರೆ ಅದರ ಗಮ್ಮತ್ತೇ ಬೇರೆ. ಕೆಲ್ಸ, ಊರು, ಕಷ್ಟ, ಕಾರ್ಪಣ್ಯ ಇದ್ದದ್ದೇ...'' ಎಂದು ನಗು ತೇಲಿಸಿದ್ದ. ಸೂಪರ್ ವೈಸರ್ ಮಾತುಗಳು ಹಿತವೆನಿಸಿದ್ದವು ರಾಮ್ ಲಾಲನಿಗೆ. ಆನಂದಿ ತನಗೆ ಒಳ್ಳೆಯ ಜೋಡಿಯಾಗಬಹುದು. ಇಬ್ಬರ ಮನೆಗಳಲ್ಲೂ ಒಪ್ಪಿದರೆ... ಓಹ್! ರಾಮ್ ಲಾಲನ ಕಣ್ಣುಗಳಲ್ಲಿ ಕಾಮನಬಿಲ್ಲು ಮೂಡಿತ್ತು. ಚಿಕ್ಕ ಮಕ್ಕಳು ಕೂಡ ಮೊಬೈಲ್‌ನಲ್ಲಿ ಆಟವಾಡುವ ಈ ಕಲಿಗಾಲದಲ್ಲೂ ತಾನೊಂದು ಮೊಬೈಲ್ ಇಟ್ಟುಕೊಳ್ಳಲು ಹಿಂದೇಟು ಹಾಕುತ್ತಿದ್ದ ರಾಮ್ ಲಾಲ್ ಈ ತಿಂಗಳ ವೇತನದಲ್ಲಿ ಒಂದು ಸಿಂಪಲ್ಲಾಗಿರೋ ಮೊಬೈಲ್ ಫೋನ್ ಕೊಳ್ಳುವ ಆಲೋಚನೆಗೆ ಬಿದ್ದ. ತಮ್ಮನ ಹತ್ತಿರವಿದ್ದ ಮೊಬೈಲ್‌ನಿಂದಲೇ ಊರಿನಲ್ಲಿದ್ದ ಅಪ್ಪ ಅಮ್ಮನೊಂದಿಗೆ ದಿನಕ್ಕೆರಡು ಬಾರಿ ಮಾತನಾಡುತ್ತಿದ್ದ. ಆನಂದಿಯ ಬಳಿ ಮೊಬೈಲ್ ಇಲ್ಲದಿರುವುದು ಅವನ ಗಮನಕ್ಕೆ ಬಂದು ಅವಳು ತುಂಬಾ ಒಳ್ಳೆಯ ಹುಡುಗಿಯೆಂದು ಭಾವಿಸಿಕೊಂಡಿದ್ದ. ಐದು ದಿನಗಳ ಹಿಂದೆ ಫ್ಯಾಕ್ಟರಿಗೆ ಹೊರಟಾಗ ಬಸ್‌ಸ್ಟಾಪಿನಲ್ಲಿ ಅವಳೂ ನಿಂತಿದ್ದಳು. ರಾಮ್ ಲಾಲ್ ಬೇಕಾಗಿಯೇ ಆಟೊ ಹಿಡಿದ. ಕಣ್ಣುಗಳಲ್ಲೇ ಅವಳನ್ನು ಕರೆದಿದ್ದ. ಅವಳು ಮಂತ್ರಮುಗ್ಧಳಾಗಿ ಬಂದು ಆಟೊದಲ್ಲಿ ಕುಳಿತಿದ್ದಳು. ಅವಳ ಮುಖ ಬಾಡಿರುವುದು ಅವನ ಗಮನಕ್ಕೆ ಬಂದಿತ್ತು.

''ಏಕೋ ಒಂಥರಾ ಇದ್ದೀರಿ...'' ಕೇಳಿದ್ದ ಮುತುವರ್ಜಿಯಿಂದ.

''ಊರಿನಿಂದ ಅಪ್ಪ ಬಂದಿದ್ದಾರೆ ಮತ್ತು ಅವರೊಂದಿಗೆ ಅಮ್ಮನ ತಮ್ಮ ಕೂಡಾ ಬಂದಿದ್ದಾರೆ.''

''ಅರೆ, ನಿಮ್ಮ ಅಪ್ಪ ಇಲ್ಲಿ ಇಲ್ಲವೆ...'' ಅವಳ ಮಾತನ್ನು ತುಂಡರಿಸಿ ಕೇಳಿದ್ದ ಕುತೂಹಲದಿಂದ. ''ನನಗೆ ಗೊತ್ತಿರದ ಕೆಲವು ವಿಷಯಗಳು ನಿನ್ನೆ ರಾತ್ರಿ ತಿಳಿದವು. ಅಮ್ಮ ಅನೇಕ ವರ್ಷಗಳ ಹಿಂದೆ ದಿಲ್ಲಿಗೆ ಬಂದಿದ್ದು ನನ್ನ ಮಲ ತಂದೆಯೊಂದಿಗಂತೆ. ನನ್ನ ಬಸಿರಿಗೆ ಕಾರಣನಾದ ಅಪ್ಪ ಊರಿನಲ್ಲಿದ್ದರಂತೆ. ಮದುವೆಗೆ ಮುಂಚೆಯೇ ಅಮ್ಮ ನನ್ನ ಮಲ ತಂದೆಯನ್ನು ಪ್ರೀತಿಸುತ್ತಿದ್ದಳಂತೆ. ಪ್ರಿಯತಮ ದಿಲ್ಲಿಯಿಂದ ಊರಿಗೆ ಹೋಗುವಷ್ಟರಲ್ಲಿ ಅಮ್ಮನಿಗೆ ಬೇರೆಯವರೊಂದಿಗೆ ಮದುವೆ ಮಾಡಿದ್ದರಂತೆ. ಅಮ್ಮನಿಗೆ ಒಂದು ಗಂಡು ಮಗು ಆಗಿ, ನನ್ನನ್ನು ಬಸುರಿನಲ್ಲಿ ಹೊತ್ತಿದ್ದಾಗ ಗಂಡನನ್ನು, ಗಂಡು ಮಗುವನ್ನು ಬಿಟ್ಟು ದಿಲ್ಲಿಯಲ್ಲಿರುವ ಪ್ರಿಯತಮ ಅಂದರೆ ನನ್ನ ಮಲತಂದೆಯೊಂದಿಗೆ ಅಮ್ಮ ಬಂದುಬಿಟ್ಟಿದ್ದಳಂತೆ.